# ಐದು ಎಪಿಸೋಡುಗಳ ನಾಯಕಿ

ಎಪಿಸೋಡು ಒಂದು

ಕನ್ನಡಿಗರೆಲ್ಲಾ ಹೆಮ್ಮೆಯಿಂದ ಅಣ್ಣಾವ್ರು ಎಂದು ಕರೆಯುವ ರಾಜ್‌ಕುಮಾರ್ ಅವರ ಮನೆಯ ವಿಶಾಲ ಆವರಣ. ಸದಾಶಿವನಗರದ ಆ ಮನೆಯಲ್ಲಿ ಹಲವು ಮುಹೂರ್ತಗಳನ್ನು ನೋಡಿದವರಿಗೆ ಆ ದಿನ ಮಸಾಲೆದೋಸೆಯ ಆತಿಥ್ಯ. ಹಂಚಿನಿಂದ ನೇರವಾಗಿ ತಟ್ಟೆಗೆ ಬಿಸಿಬಿಸಿ ದೋಸೆ ಬಿದ್ದು, ಅದರಿಂದ ಹೊಗೆ ಹೊಮ್ಮುವ ಹೊತ್ತಿಗೆ ಸರಿಯಾಗಿ ನಾಯಕ ಪುನೀತ್, ಅಪ್ಪನ ಚಿತ್ರವಿದ್ದ ಬಿಳಿ ಟಿ–ಶರ್ಟ್ ತೊಟ್ಟು ಬಂದರು. ಅದೇತಾನೆ ಅವರು ತನ್ನ ಹೊಸ ಸಿನಿಮಾದ ನಾಯಕಿಯರ ಆಯ್ಕೆಗೆ ಒಂದಿಷ್ಟು ಫೋಟೊಗಳನ್ನು ಹೆಕ್ಕಿ, ನಿರ್ದೇಶಕ ಪ್ರಕಾಶ್ ಅವರಿಗೆ ಕೊಟ್ಟು ಬಂದಿದ್ದರು. ಅವುಗಳಲ್ಲಿ ಒಂದು ಫೋಟೊ ಅನೇಕರ ಮೆಚ್ಚುಗೆಗೆ ಕಾರಣವಾಯಿತು. ಸೌಂದರ್ಯದ ಜೊತೆಗೆ ಮುಗ್ಧತೆಯೂ ಬೆರೆತ ಮುಖ, ನೃತ್ಯ ಲಾಲಿತ್ಯ, ಮೊನಚಾದ ಕಣ್ನೋಟ ಕಂಡ ಪುನೀತ್ ಆಪ್ತೇಷ್ಟರು ನಾಯಕಿಯನ್ನು ಮೆಚ್ಚಿ ಮಾತನಾಡಿದರು. ಫೋಟೊದಲ್ಲಿ ಇದ್ದ ಅದೇ ಹುಡುಗಿ ಸಿನಿಮಾದ ನಾಯಕಿಯಾಗಿ ಆಯ್ಕೆಯಾದದ್ದು.

ಎಪಿಸೋಡು ಎರಡು

ಐಷಾರಾಮಿ ಹೋಟೆಲ್‌ನ ಲಾಂಜ್‌ನಲ್ಲಿ ಕಾಲಮೇಲೆ ಕಾಲು ಹಾಕಿ ಅದೇ ನಟಿ ಕುಳಿತಿದ್ದರು. ಒಂದೇ ದಿನ ಮೂರು ಸಿನಿಮಾಗಳ ಕುರಿತ ಚರ್ಚೆ. ಅವಕಾಶಗಳು ಬಂದರೆ ಹೀಗೆ ಒದ್ದುಕೊಂಡು ಬರುತ್ತವೆ ಎಂದು ಸಿನಿಮಾ ಮರ್ಮ ಬಲ್ಲ ಜಾಣರು ಮಾತನಾಡಿಕೊಂಡರು. ಆಮೇಲೆ ಗೊತ್ತಾದದ್ದು– ಆ ನಟಿಯ ಠಿಕಾಣಿ ಸದಾ ಅದೇ ಹೋಟೆಲ್‌ನಲ್ಲಿ. ಅವರ ಯೋಗಕ್ಷೇಮದ ಜವಾಬ್ದಾರಿಯನ್ನು ನೀಳಕಾಯದ ನಟ ಹೊತ್ತುಕೊಂಡಿದ್ದರು.

ಎಪಿಸೋಡು ಮೂರು

ಪತ್ನಿಗೆ ಪೆಟ್ಟು ಕೊಟ್ಟು, ಪೊಲೀಸ್ ಠಾಣೆಯ ಮೆಟ್ಟಿಲೇರುವ ಪ್ರಸಂಗ ಆ ನಾಯಕನಿಗೆ ಎದುರಾಯಿತು. ಆಗ ಐಷಾರಾಮಿ ಹೋಟೆಲ್‌ನ ನಾಯಕಿ ಇದ್ದ ಕೋಣೆಗೂ ಆ ನಾಯಕನಿಗೂ ಇರುವ ಸಂಬಂಧದ ಕುರಿತು ಚರ್ಚೆ ನಡೆದದ್ದನ್ನು ಸಿನಿಪ್ರೇಮಿಗಳೂ ಕೇಳಿಸಿಕೊಂಡರು.

ಎಪಿಸೋಡು ನಾಲ್ಕು

ಸಾಹಸ ಪ್ರಧಾನ ಸಿನಿಮಾದಲ್ಲಿ ಹೊಸ ನಾಯಕನ ಜೊತೆ ಅಭಿನಯಿಸಲು ಈ ನಾಯಕಿ ಒಪ್ಪಿದ್ದು ಅದರ ನಿರ್ದೇಶಕರ ಕಾರಣಕ್ಕೆ. 'ಎ.ಕೆ. 47' ತರಹದ ಸಿನಿಮಾ ಮಾಡಿದ್ದ ನಿರ್ದೇಶಕರು ಇನ್ನೊಂದು ಮಾದರಿಯ ಶಸ್ತ್ರಾಸ್ತ್ರದ ಹೆಸರಿಟ್ಟು ಸಿನಿಮಾ ಮುಹೂರ್ತ ನಡೆಸಿದರು. ನಾಯಕ ಹೊಸಬನಾದರೂ ಒಳ್ಳೆ ಕುಳ. ಆ ದಿನ ಆತ ಮುಗ್ಧನಂತೆ ಕಾಣುತ್ತಿದ್ದ. ಪಕ್ಕದಲ್ಲಿ ನಿಂತಿದ್ದ ನಟಿಯನ್ನ ನೋಡಿದ ಅನೇಕರು, ಮೊದಲ ಸಿನಿಮಾ ಸಂದರ್ಭದಲ್ಲಿ ಫೋಟೊ ನೋಡಿ ಮುಗ್ಧೆಯೆಂದು ತಪ್ಪು ಭಾವಿಸಿದ್ದಕ್ಕೆ ಪೇಚಾಡಿಕೊಂಡರು. ಶಸ್ತ್ರಾಸ್ತ್ರ ಪ್ರಿಯ ನಿರ್ದೇಶಕರು ನಿರ್ಲಜ್ಜೆಯಿಂದ ಡಬ್ಬಲ್ ಮೀನಿಂಗ್ ಜೋಕ್‌ಗಳನ್ನು ಸಿಡಿಸುತ್ತಿದ್ದರೆ, ಅರೆಗನ್ನಡದ ನಾಯಕಿ ಅವುಗಳ ಅರ್ಥವನ್ನು ಬೇರೊಬ್ಬರಿಂದ ಕೇಳಿ ಕೃತಾರ್ಥರಾಗುತ್ತಿದ್ದರು. ತಾನೂ 'ನಾನ್‌ವೆಜ್ ಜೋಕ್ ಪ್ರಿಯೆ' ಎನ್ನುವುದನ್ನು ಸ್ಪಷ್ಟಪಡಿಸಲು ಕೆಲವು ಸ್ಯಾಂಪಲ್‌ಗಳನ್ನೂ ಬಿಸಾಡಿದರು.

ಎಪಿಸೋಡು ಐದು

ರಿಯಾಲಿಟಿ ಶೋನಲ್ಲಿ ಭಾಗವಹಿಸಲು ಬ್ಯಾಗೇಜ್ ತಯಾರಿ ಮಾಡಿಕೊಂಡಾಗ ಆ ನಟಿ ನೀಳಕಾಯದ ನಾಯಕನ ಅನುಮತಿಯನ್ನು ಕೇಳಿದ್ದರೋ ಇಲ್ಲವೋ ಎಂಬ ಚರ್ಚೆ ನಡೆಯಿತಾದರೂ ಉತ್ತರ ಸಿಗಲಿಲ್ಲ.

● **ವಿಶಾಖ ಎನ್.**

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68